Regd No BG 155 18-9-1969

SATYAVADI

Daily

MYSORE 4

53 rd Year of Publication

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಏರತ್ತೀದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮೈಸೂರು ರಾಜ್ಯದಲ್ಲಿ ಬಂದಿಗಳಿಗೆ ಕ್ಷಮಾದಾನ

ಅಣ್ಣಾ ಸ್ಮಾರಕ ಡ್ಯಾಮೇಜು

ಸೇಲಂ— ಕೊನಾರಪಾಳ್ಳ ರಸ್ತೆ ಸೇತುವೆ ಹತ್ತಿರ ತಾ ॥ 15 ರಂದು ಮುಖ್ಯಮಂತ್ರಿ ಕರುಣಾನಿಧಿಯವರು ಅನಾವರಣ ಮಾಡಿದ ಅಣ್ಣಾ ಧೋತಿ ಸ್ಮಾರಕವಿನಲ್ಲಿ ಮುಖವನ್ನು ಕೆಡಿಸಿ ಮೂಗನ್ನು ಡ್ಯಾಮೇಜು ಮಾಡಿದ್ದಾರೆ.

"ಸತ್ಯವಾದಿ" ಯ ಸ್ವರ್ಣೋತ್ಸವ

28-9-1969 ಭಾನುವಾರ
ಬೆಳಿಗ್ಗೆ 10 ಗಂಟೆಗೆ
ಮೈಸೂರು 4, ಚಾಮರಾಜಪುರಂನಲ್ಲಿನ
'ಸತ್ಯವಾದಿ' ಆಫೀಸಿನಲ್ಲಿ

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಿತ್ತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ಎಂ.ಸಿ. ಮೋದಿಯವರು, ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯಮೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆವೆಂದು ತಕ್ಕಜ್ಞತಾಪೂರ್ವಕ ನಂಬಿಸುತ್ತೇವೆ.

ರಾಜಾಜಿ ಹೇಳೋದು

ಮದರಾಸು — ಪ್ರಧಾನಿ ಇಂದಿರಾನವರ ಪ್ರವೃತ್ತಿ ನುತ್ತು ನೀತಿ ದೇಶಕ್ಕೆ ಹಿತಕರವಾಗಿಲ್ಲವೆಂದು ಶ್ರೀ ರಾಜಗೋಪಾಲಾಚಾರಿಯವರು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ — ಕಾರ್ ಆವಶ್ಯ ಪದಾರ್ಥವೆಂದು ಹೇಳುವುದೂ, ಪಾನನಿರೋಧ ಹೋಗುತ್ತಿರುವುದೂ ಸರಿಯಲ್ಲವೆಂದಿದ್ದಾರೆ.

○

ಕುಟುಂಬ ಯೋಜನೆ ಖರ್ಚು

ಬೆಂಗಳೂರು— ಕುಟುಂಬ ಯೋಜನ ಚಳವಳಿಗೆ ಮೈಸೂರನಲ್ಲಿ ಕಳೆದ ವರ್ಷದ ಖರ್ಚು ರೂ 148 ಲಕ್ಷ : 69-70 ರಲ್ಲಿ ರೂ 195 ಲಕ್ಷ ಖರ್ಚು ಮಾಡಲ್ಪಡುವುದು ಎಂದು ಉಪ ಆರೋಗ್ಯ ಮಂತ್ರಿ ಹೇಳಿದರು.

★

ಹುಡುಗಾಟ

ಸೋಫಿಯಾ— ಒಬ್ಬ ಟರ್ಕಿ ವಿದ್ಯಾರ್ಥಿಯು ಆಟದ ಬಂದೂಕ ಆಡಿಸಿ, 61 ನುಂಡಿ ಇದ್ದ ಟರ್ಕಿ ವಿನೂತನನನ್ನು ಕೆಳಗಿಳಿಸಿದನು — ಪೋಲೀಸರು ಅವನನ್ನು ದಸ್ತಗಿರಿ ಮಾಡಿದರು.

○

ಕಾಶ್ಮೀರದಲ್ಲಿ ಜಾರಿಗೆ ಬರಲಿ

ಶ್ರೀನಗರ— ನ್ಯಾಯಬಾಹಿರ ಚಟುವಟಿಕೆ ಶಾಸನವು ಜಮ್ಮು ಕಾಶ್ಮೀರದಲ್ಲೂ ಜಾರಿಗೆ ಬರಬೇಕೆಂದು ಶ್ರೀ ವಾಜಪೇಯಿ ಹೇಳಿದರು.

★

ಕಾಂಗ್ರೆಸ್ ಒಡೆಯುತ್ತಿದ್ದದ್ದು ತಪ್ಪಿದ್ದು

ಜಯಪುರ.... ಮಹಾರಾಜ ಕರ್ನಿಸಿಂಗ್ ಎಂ ಪಿ. ಯವರು ತಾವೂ ಸೇರಿ 30 ಮಂದಿ ಸ್ವತಂತ್ರ ಪಾರ್ಲಿಮೆಂಟು ಸದಸ್ಯರು ಕಾಂಗ್ರೆಸ್ಸನ್ನು ಒಡೆಯುತ್ತಿದ್ದುದನ್ನು ತಪ್ಪಿಸಿದುದಾಗಿ ಹೇಳಿದರು.

ಖಾಯಿಲೆ ಮಿರ್ಜ

ಮೆಲ್ಬೋರ್ನ— ಒಂದು ಮೂತ್ರಕೋಶದ ಮಿರ್ಜ ಹಿಪೆಲಾಟಿಸ್ ಖಾಯಿಲೆ ಗ್ರಹಿಸಿ, ತನ್ನ ರೋಗಿಗಳಿಗೆ ಖಾಯಿಲೆ ಹರಡುತ್ತಿರುವುದೆಂದೂ, ಖಾಯಿಲೆ ಆಪತ್ತಿಯವರು ಹೇಳುತ್ತಿದ್ದಾರೆ.

★

ಶರತ್ ಸೇತುವೆ

ಕಲ್ಕತ್ತ— ರೂಪನಾರಾಯಣ ನದಿ ಮೇಲೆ ಕಟ್ಟಿರುವ ಪಶ್ಚಿಮ ಬಂಗಾಳಾದಲ್ಲೆ ಅತಿ ದೊಡ್ಡದಾದ 3300 ಅಡಿ ಉದ್ದದ ಸೇತುವೆಗೆ 'ಶರತ್ ಸೇತು" ಎಂದು ಖ್ಯಾತ ಕಾದಂಬರಿಕಾರ ಶರತ್ ಚಟ್ಟೋಪಾಧ್ಯಾಯರ ಹೆಸರಿಡಲಾಯಿತು.

★

ಬೆಂಗಳೂರಿನಲ್ಲಿ ಅಧ್ಯಕ್ಷರು

ಬೆಂಗಳೂರು— ತಮಿಳುನಾಡುವಿನಲ್ಲಿನ ಪ್ರವಾಸಾನಂತರ ರಾಷ್ಟ್ರಾಧ್ಯಕ್ಷ ಶ್ರೀ ಗಿರಿಯವರು ನಿನ್ನೆ ಬೆಂಗಳೂರಿಗೆ ಆಗಮಿಸಿದರು — ಸುಸ್ವಾಗತಿಸಲ್ಪಟ್ಟು ಹಂಗಾಮಿ ಗೌರ್ನರರು ಹಾರಹಾಕಿದರು.

★

ಕಾರ್ ಬೆಲೆ

ನವದೆಹಲಿ— ಟ್ಯಾರಿಫ್ ಕಮಿಷನ್ ಶಿಫಾರಸಿನ ರೀತ್ಯ ಶಿಫಾರಸಿನ ರೀತ್ಯ ಕಾರುಗಳ ಬೆಲೆ ಮೇಲೆ ಶಾಸನಬದ್ಧ ಹತೋಟಿ ಇರುವದನ್ನು ಮಂತ್ರಿಮಂಡಲ ತತ್ವದಲ್ಲಿ ಒಪ್ಪಿದೆ.

★

ಸಕ್ಕರೆ

ನವದೆಹಲಿ— ಅಕ್ಟೋಬರಿಗೆ 1,89 ಲಕ್ಷ ಟನ್ ಸಕ್ಕರೆ, ಮತ್ತು 1 ಲಕ್ಷ ಟನ್ ಅನಿರ್ಬಂಧ ಮಾರಾಟ ಸಕ್ಕರೆ ಬಿಡುಗಡೆಗೆ ಸರ್ಕಾರ ಆಜ್ಞೆ ಮಾಡಿದೆ.

★

ಫಾತೇಸಿಂಗ್ ಬೆದರಿಕೆ

ಅಮೃತಸರ— ತಮ್ಮೊಡನೆ ಚಂಡೀಘರ್ ಸಮಸ್ಯೆ ವಿಷಯದಲ್ಲಿ ತಾ ॥ 26 ರೊಳಗೆ ಪ್ರಧಾನಿಯರು ಚರ್ಚೆ ನಡೆಸದಿದ್ದಲ್ಲಿ ತಮಗೆ ಬೇಕಾದ ಕಾರ್ಯಕ್ರಮ ಕೈಗೊಳ್ಳಲು ತಾವು ಸ್ವತಂತ್ರರೆಂದು ಅಕಾಲಿನಾಯಕ ಸಂತ್ ಫಾತೇ ಸಿಂಗ್ ಹೇಳಿದರು.

125 ಪಾರ್ಲಿಮೆಂಟ್ ಸದಸ್ಯರ ಕೇಳಿಕೆ

ನವದೆಹಲಿ— ಭಾರತವು ಚೀನಾದೇಶದೊಡನೆ ಎಲ್ಲಾ ರಾಜಕಾರಣ ಸಂಬಂಧವನ್ನು ತ್ಯಜಿಸಲು 125 ಎಂ ಪಿ ಗಳು ಸರಕಾರಕ್ಕೆ ತಿಳಿಸಿದ್ದಾರೆ.

★

ರಾಷ್ಟ್ರೀಯ ಹೆದ್ದಾರಿ

ಬೆಂಗಳೂರು— ಬೆಂಗಳೂರು — ಬೊಂಬಾಯಿ ಸೇರಿಸುವ ನಾಲ್ಕನೇ ರಾಷ್ಟ್ರೀಯ ಹೆದ್ದಾರಿಯನ್ನು ಉತ್ತಮಪಡಿಸಲು ಮೈಸೂರು ಸರಕಾರವು ವಿಶ್ವಬ್ಯಾಂಕಿನಿಂದ ರೂ 12.5 ಕೋಟಿ ನೆರವು ಕೇಳಿದೆ.

★

ಖೈದಿಗಳಿಗೆ ಕ್ಷಮಾಪಣೆ

ಬೆಂಗಳೂರು— ಗಾಂಧಿ ಶತಮಾನೋತ್ಸವ ದಿನ ಅಕ್ಟೋಬರು 2 ರಂದು, ಸರಕಾರದವರು ಖೈದಿಗಳಿಗೆ ಶಿಕ್ಷೆ ಮಾಫಿ ಅಥವಾ ಕಡಮೆ ಮಾಡುವ ನಿರ್ಧಾರದಲ್ಲಿ 120 ಕ್ಕೂ ಹೆಚ್ಚು ಮಂದಿಗೆ ಪ್ರಯೋಜನವಾಗುವುದು.

○

ಸೇತುವೆ ನಿರ್ಮಾಣಕ್ಕೆ ಅನುಮತಿ

ಬೆಂಗಳೂರು— ಕೃಷ್ಣಾ ನದಿಯ ಮೇಲೆ ಆಲಮಟ್ಟಿ ಅಣೆಕಟ್ಟು ಹತ್ತಿರ ರೂ. 49.50 ಲಕ್ಷದ ಅರ್ಧ ಮೈಲಿ ಸೇತುವೆ ಕಟ್ಟಲು ಭಾರತ ಸರ್ಕಾರ ಮಂಜೂರ್ಮಾಡಿದೆ.

ದೇವಾಲಯದ ಭೂಮಿ

ತಿರುಚರಪಳ್ಳಿ— ಪರಿಮಿತಿಗಿಂತ ಹೆಚ್ಚಾಗಿರುವ ದೇವಾಲಯದ ಭೂಮಿಯನ್ನು ಗೇಣಿದಾರರಿಗೆ ಕೊಡುವ ಯೋಜನೆ ಇಲ್ಲವೆಂದು ಮುಖ್ಯ ಮಂತ್ರಿ ಕರುಣಾನಿಧಿಯವರು ಹೇಳಿದರು.

★

ಗಾಂಧಿ ಶತಮಾನೋತ್ಸವ

ಉಡುಪಿ— ಗಾಂಧಿ ಶತಮಾನೋತ್ಸವ ಸಮಿತಿಯವರು ಒಂದು ವಾರ ಸಮಾರಂಭ ಕಾರ್ಯಕ್ರಮ ಏರ್ಪಡಿಸಿರುವರು.

———

ಪುರಸಭೆ

ಮೈಸೂರು— ನಿನ್ನೆ ಪುರಸಭಾಧ್ಯಕ್ಷ ಶ್ರೀ ಎಂ ಎಸ್ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಮಾಟಂಗಿನಲ್ಲಿ. ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮುಂದೆ ವೃತ್ತಪಿತಾಮಹ ಶ್ರೀ ವೆಂಕಟ್ಟಕೃಷ್ಣಯ್ಯನವರ ಸ್ಮಾರ್ಕ್ಯ ಹತ್ತಿರವಿದ್ದ ಎರಡು ಸಾಲುಮರ ಕಡಿದು ಹಾಕಿರುವವರ ಮೇಲೆ ಕ್ರಮಕ್ಕೆಗೊಳ್ಳಲು ಸೂಚಿಸಲಾಗಿದೆಯೆಂದು ಅಧ್ಯಕ್ಷರು ತಿಳಿಸಿದರು — ರಸ್ತೆ ಮಾಡುವ ಕಂಟ್ರಾಕ್ಟರರ ಕೆಲಸ ಅತೃಪ್ತಿಕರವಾಗಿದ್ದು ಬಹು ಬೇಗ ಕೆಟ್ಟುಹೋಗುತ್ತಿದೆಯೆಂದೂ ಸರಿಯಾದವರಿಂದ ಕೆಲಸ ಮಾಡಿಸಬೇಕೆಂದೂ ಶ್ರೀ ಚೌಡಯ್ಯನವರು ಹೇಳಿದರು.

———

ಮಂಗಳ ಗ್ರಹದಲ್ಲಿ 1980 ರ ಹೊತ್ತಿಗೆ ಮಾನವನನ್ನು ಇಳಿಸುವ ಯೋಜನೆಯನ್ನು ಅಮೇರಿಕಾ ಹೊಂದಿದೆ.

★

ಕನ್ನಡ ವಿಶ್ವವಿದ್ಯಾಲಯದ ಕನ್ನಡ ವ್ಯಾಸಂಗ ಸಂಸ್ಥೆಗೆ ರಾಮದುರ್ಗದಲ್ಲಿ ವೇದಮತ್ತು ಸಂಸ್ಕೃತ ಭಾಷೆಗೆ ಸಂಬಂಧಿಸಿದ ಅಮೂಲ್ಯ ಗ್ರಂಥಗಳು ಮತ್ತು ಕೈಬರಹದ ಪ್ರತಿಗಳು ದೊರೆತಿವೆ.

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ಪಾಣಿದಯಾ ಕಾರ್ಯಗಳ ಹೆಚ್ಚಳಕ್ಕಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

ವುಡ್‌ಲ್ಯಾಂಡ್ಸ್ ಜಯಪ್ರದ 2ನೇ ವಾರ

— ಅತ್ಯಾಕರ್ಷಣೀಯ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಸಾಜನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರೇಖ್, ಓಂ ಪ್ರಕಾಶ್

ಮದನಪುರಿ, ಶಬ್‌ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೆರಾ ಅಮೋಘ 2ನೇ ವಾರ

.... ಚಿತ್ತಾಕರ್ಷಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಮಹಲ್

ನಾತ್ರ— ದೇವಾನಂದ್, ಆಶಾ ಪರೇಖ್, ಅಭಿ ಭಟ್ಟಾಚಾರ್ಯ

ಡೇವಿಡ್, ಅಜ್ರಾ, ಸುಧೀರ್

ನಿರ್ದೇಶನ— ಶೇಖರ್ ಮುಖರ್ಜಿ ಸಂಗೀತ— ಕಲ್ಯಾಣ್‌ಜೀಆನಂದ್ಜಿ

ದಿನ 3 ಆಟಗಳು

Golden Jubilee of 'Satyavadi'

Sunday 28–9–1969

at 'Satyavadi' office Chamarajapuram, Mysore 4.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwarak Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi Sri Opera Talkies, Padmabhushana Dr. M.C. Modi, Dr. R. S. Nanjunda swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

SHAKTI SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4